# *ಔದ್ಯಮಿಕ ಜಗತ್ತಿನಲ್ಲಿ ಭಾಷೆಯ ಪ್ರಶ್ನೆ

ಕಾರ್ಮಿಕ ಚಳುವಳಿ ಎದುರಿಸುವ ಸಮಸ್ಯೆಗಳ ಬಗ್ಗೆ ಆಗಾಗ್ಗೆ ನಡೆಯುವ ಚರ್ಚೆ ಸಂಕಿರಣ ಇತ್ಯಾದಿಗಳಲ್ಲಿ ಭಾರತೀಯ ಕಾರ್ಮಿಕವರ್ಗದ ಒಂದು ಪ್ರಮುಖ ಸಮಸ್ಯೆಯನ್ನು ಕಡೆಗಣಿಸಲಾಗುತ್ತಿದೆ. ಬಹುಶಃ ಇದು ಉದ್ಯಮದಲ್ಲಿ ಸಂವಹನದ ಬಗ್ಗೆ ನಡೆಯುವ ಎಲ್ಲ ಸಂಘಟಿತ ಚರ್ಚೆಯ ಆಧಾರ, ಭಾರತೇತರ ಪಂಡಿತರ ಮತ್ತು ಅವರ ಭಾರತೀಯ ನಕಲುಗಾರರ ಅಧ್ಯಯನ ಮತ್ತು ಪುಸ್ತಕಗಳೇ ಆಗಿರುವುದರಿಂದ ಇರಬೇಕು. ಇಲ್ಲಿ ನಾನು ಭಾರತೀಯ ಉದ್ಯಮಗಳಲ್ಲಿನ ವಿವಿಧ ವಿಭಾಗಗಳ ನಡುವಿನ ಸಂವಹನದಲ್ಲಿ ಭಾಷೆಯ ಅಡ್ಡಗೋಡೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ.

ಕೆಲಸಗಾರ ಮತ್ತು ಮಾಲಿಕನ ನಡುವಿನ, ಮಾಲಿಕ ಮತ್ತು ಕಾರ್ಮಿಕ ಸಂಘದ ನಡುವಿನ ಹಾಗೂ ಕಾರ್ಮಿಕಸಂಘ ಮತ್ತು ಕೆಲಸಗಾರನ ನಡುವಿನ ಸಂಪರ್ಕದಲ್ಲಿ ಸಹ ಅನೇಕ ವಿಧವಾದ ಅಡ್ಡಿಗಳಿವೆ. ಇಂಥ ಅನೇಕ ಅಡ್ಡಿಗಳು ಸಮಾಜದ ವರ್ಗ ಅಥವಾ ಜಾತಿ ರಚನೆಯಿಂದ ಉಂಟಾದವಾದರೂ ಇನ್ನೊಂದು ಮುಖ್ಯ ಅಡ್ಡಿಯು ಉದ್ಯಮ ಸಂಬಂಧಗಳಲ್ಲಿ. ಇಂಗ್ಲಿಷ್ ಹೊಂದಿರುವ ಸ್ಥಾನದಿಂದ ಉಂಟಾಗುವಂಥದ್ದು. ಕೆಲಸಗಾರನು ತಾನು ಕೆಲಸಮಾಡುವ ವ್ಯವಸ್ಥೆಯ ಮತ್ತು ಪರಿಸ್ಥಿತಿಯ ಬಗ್ಗೆ ಅರಿಯಲು ಯತ್ನಿಸಿದಾಗ, ತನ್ನ ಹಕ್ಕು ಮತ್ತು ಹೊಣೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ, ತನ್ನ ಸಮಸ್ಯೆಗಳನ್ನು, ಆಲೋಚನೆಗಳನ್ನು, ಮತ್ತು ಭಾವನೆಗಳನ್ನು ಇತರರೊಡನೆ ಹೇಳಿಕೊಳ್ಳ ಬಯಸುವಾಗ ಇಂಗ್ಲೀಷ್ ಒಂದು ಪ್ರಬಲವಾದ ಅಡ್ಡಿಯಾಗಿ ಕೆಲಸಮಾಡುತ್ತದೆಂದು ನನಗನಿಸುವುದು.

ಉದ್ಯಮ ಸಂಬಂಧಗಳು (Industrial Relations) ವಿಶಿಷ್ಟವಾದ ಮತ್ತು ತೊಡಕುಗಳಿಂದ ಕೂಡಿದ ವಿಚಾರಗಳು ; ಅದನ್ನು ಇಂಗ್ಲಿಷ್ ಬಲ್ಲವರಿಂದ ಸಹ ಸರಿಯಾಗಿ ಅರ್ಥಮಾಡಿಕೊಳ್ಳುವುದು ಅಸಾಧ್ಯ ; ಏಕೆಂದರೆ ಅದು ಭಾಷೆಯ ಪ್ರಶ್ನೆಯಲ್ಲ, ಪರಿಣತಿಯಪ್ರಶ್ನೆ–ಹೀಗೆನ್ನುವುದು ಉದ್ಯಮ ಸಂಬಂಧಗಳ ಉದ್ದೇಶಕ್ಕೆ ಸಂಗತವೆನಿಸುವುದಿಲ್ಲ. ಆಧುನಿಕ ಉದ್ಯಮ ಸಂಬಂಧಗಳಿಗೆ ಭಾಷೆಯನ್ನು ಮೀರಿದ ಒಂದು ವಿಶಿಷ್ಟಗುಣವಿದೆ ಎನ್ನುವುದು ನಿಜವೇ ಆದರೆ, ಪರಿಣತಿಯ ಜೊತೆಗೆ ಇಂಗ್ಲಿಷ್ ಸಹ ಕೆಲಸಗಾರ ಮತ್ತು ಇತರರ ನಡುವೆ ಒಂದು ಪರಿಣಾಮಕಾರಿ ತಡೆಯಾಗಿ ಕೆಲಸ ಮಾಡುತ್ತದೆನ್ನುವುದು ಸಹ ಅದರ ಎರಡರಷ್ಟು ನಿಜವಾದ ಮಾತಾಗುತ್ತದೆ.

---

*ಬೆಂಗಳೂರಿನ ಕಾರ್ಮಿಕ ಶಿಕ್ಷಣ ತರಗತಿಯ ಭಾಷಣವೊಂದರಿಂದ 1972.

ಕಾರ್ಮಿಕನ ದೃಷ್ಟಿಕೋನದಿಂದ ಪರಿಸ್ಥಿತಿಯನ್ನು ಗಮನಿಸೋಣ. ಎದ್ದು ತೋರುತ್ತಿರುವಂತೆಯೆ, ಕಾರ್ಮಿಕನಿಗೆ ತಾನಿರುವ ಸನ್ನಿವೇಶದ ಬಗ್ಗೆ ತುಂಬಾ ನಿರಾಶೆಯಿದೆ. ಆತನೊಂದಿಗೆ ತೀವ್ರ ಸಂಬಂಧ ಹೊಂದಿದ ಪ್ರತಿಯೊಂದು ಸಂಗತಿಯೂ ಇಂಗ್ಲಿಷ್‌ನ ಮೂಲಕವೇ ನಡೆಯುತ್ತದೆ. ಚಾಲ್ತಿಯಲ್ಲಿನ ಆಜ್ಞೆಗಳನ್ನು, ಒಪ್ಪಂದಗಳನ್ನು, ಮಾತುಕತೆಗಳನ್ನು ಕೆಲವು ಬಾರಿ ಆತನ ಸಂಘದ ಕಾರ್ಯಕಾರಿಣಿಯ ಚರ್ಚೆಗಳನ್ನು ಗೊತ್ತುವಳಿಗಳನ್ನು, ಕಾರ್ಮಿಕ ನ್ಯಾಯಾಲಯದ ನಡಾವಳಿಗಳನ್ನು, ಸಂಘ ಮತ್ತು ಆಡಳಿತ ಮಂಡಳಿಯ ನಡುವಿನ ವ್ಯವಹಾರಗಳನ್ನು ಸಹ ಇಂಗ್ಲಿಷ್‌ನ ಮೂಲಕ ನಡೆಸಲಾಗುತ್ತದೆ. ಕಾರ್ಮಿಕನಿಗೆ, ಈ ಪರಿಸ್ಥಿತಿಯಲ್ಲಿ ತಾನು ಪೂರ್ತಿ ಪರಕೀಯನಾದಂತೆ ಅನಿಸುತ್ತಿರಬೇಕು. ಸಹಜವಾಗಿಯೇ ಆತ ತನ್ನ ಸುತ್ತಾ ಇರುವ ಎಲ್ಲರ ಬಗ್ಗೆಯೂ ಆಳವಾಗಿ ಸಂಶಯ ಪಡುತ್ತಾನೆ. ಇದು ಅವಶ್ಯವಾಗಿ ಆತನ ಮನಸ್ಸಿನಲ್ಲಿ ಅಸಹನೆಯ ಭಾವನೆಯನ್ನು ಬೆಳೆಸಿ, ಹೀನ ಪ್ರಜ್ಞೆಯನ್ನು ನಿರಾಶೆಯನ್ನೂ ಮೂಡಿಸುತ್ತದೆ. ಆತ ಅನೇಕ ಬಾರಿ ತನ್ನ ಮುಖಂಡರಿಂದಲೇ ದೂರವಾದಂತೆ ಭಾವಿಸಿಕೊಳ್ಳುತ್ತಾನೆ. ದೇಶ ಕಟ್ಟುವವರು ಎಂದೆಲ್ಲ ಉಬ್ಬಿಸಲ್ಪಡುವ ಕಾರ್ಮಿಕರ ಪರಿಸ್ಥಿತಿ ಇದು. ನನಗನ್ನಿಸುತ್ತದೆ, ತಮ್ಮ ಕೆಲಸದ ಜಾಗದಲ್ಲಿ ಈ ಭಾಷೆಯ ಗೋಡೆಯಿಂದ ತಾವು ಅನುಭವಿಸುವ ಹೀನ ಪ್ರಜ್ಞೆಯನ್ನು, ತೀವ್ರ ನಿರಾಶೆಯನ್ನು ಕಾರ್ಮಿಕರು ಮಾತ್ರ ಸಂಪೂರ್ಣವಾಗಿ ಪ್ರಕಟಪಡಿಸಬಲ್ಲರು. ದಿಢೀರನೆ ಹೊಣೆಗೇಡಿ ಅವಾಂತರಗಳನ್ನು ನಡೆಸುವುದರಲ್ಲಿ, ಕಾರ್ಮಿಕ ಸಂಘದ ಶ್ರೇಣಿಗಳು ತಮ್ಮ ಪೂರ್ತಿ ನಾಯಕತ್ವದ ಮಟ್ಟಕ್ಕೆ ಏರದಂತೆ ತಡೆಯುವುದರಲ್ಲಿ, ಕೆಲಸಗಾರರು ಮತ್ತು ಇತರರ ನಡುವೆ ಅಭಿಪ್ರಾಯಗಳು ವಿನಿಮಯವಾಗದಂತೆ ತಡೆಯುವುದರಲ್ಲಿ, ಕೆಲಸಗಾರರು ನೀಡಬಹುದಾದ ಸೃಜನಾತ್ಮಕ ಸಲಹೆಗಳ ಮುಕ್ತ ಅಭಿವ್ಯಕ್ತಿಯನ್ನು ಕೊಲ್ಲುವುದರಲ್ಲಿ ಈ ಇಂಗ್ಲಿಷ್ ಭಾಷೆ ನಡೆಸುವ ಕುತಂತ್ರಗಳನ್ನು ನಿಚ್ಚಳಗೊಳಿಸುವುದಿರಲಿ, ಪರಿಗಣಿಸಿಯೂ ಕೂಡ ಇಲ್ಲ. ಕಾರ್ಮಿಕ ಚಳವಳಿಯಲ್ಲಿ ಕಾರ್ಮಿಕರದೇ ನಾಯಕತ್ವದ ವಿರುದ್ಧ ಹೊರಗಿನವರ ನಾಯಕತ್ವದಂತಹ ವಿಚಾರದ ಚರ್ಚೆಯೂ ಈ ಸಮಸ್ಯೆಯ ಭಾರತೀಯ ಮುಖದ ಬಗೆಗಿನ ಅಜ್ಞಾನದಿಂದಲೇ ನಡೆಯುತ್ತದೆ. ಒಬ್ಬ ಸಾಮಾನ್ಯ ಭಾರತೀಯ ಕೆಲಸಗಾರ, ಹೆಚ್ಚೆಂದರೆ ಎಂಟರಿಂದ ಹತ್ತು ವರ್ಷಗಳವರೆಗಿನ ಶಾಲಾ ಶಿಕ್ಷಣ ಹೊಂದಿರಬಲ್ಲಾತ ರಚನೆ ಮತ್ತು ಶಬ್ದಕೋಶಗಳಲ್ಲಿ ತನ್ನ ಭಾಷೆಗಿಂತ ಪೂರಾ ಭಿನ್ನವಾದ ಭಾಷೆಯೊಂದರಲ್ಲಿರುವ, ತೊಡಕಿನಿಂದ ಕೂಡಿರುವ ಉದ್ಯಮ ಸಂಬಂಧಗಳೊಡನೆ ಹೇಗೆ ತಾನೆ ಹೆಣಗಾಡಬಲ್ಲ?

ಅವನ್ನೆಲ್ಲ ಆತ ಕಲಿಯ ಬಯಸಿದರೂ, ಆ ವಿಷಯಗಳ ಬಗ್ಗೆ ಆತನಿಗೆ ತನ್ನ ಭಾಷೆಯಲ್ಲಿ ಪುಸ್ತಕಗಳಾಗಲೀ ಮಾಹಿತಿಯಾಗಲೀ ಇಲ್ಲ. ಆಧುನೀಕರಣ ಮತ್ತು ಜನತಾಂತ್ರೀಕರಣದ ಕ್ರಮಗಳಲ್ಲಿ ಕೆಲಸಗಾರರು ಬೌದ್ಧಿಕ ಸಿದ್ಧತೆಯಿಲ್ಲದ ಕಾರಣ ಪಾಲ್ಗೊಳ್ಳಲಾಗದಿದ್ದರೆ ಹೇಗೆ ತಾನೆ ಅವು ಸಾಧ್ಯವಾದಾವು? ತಮ್ಮ ವ್ಯವಹಾರ

ಗಳನ್ನು ತಮಗೆ ಚೆನ್ನಾಗಿ ತಿಳಿದಿರುವ ಭಾಷೆಯಲ್ಲಿ ನಡಸಿಕೊಂಡು ಹೋಗುವಂತೆ ಅವರವರ ಭಾಷೆಗಳಲ್ಲೇ ಅವರಿಗೆ ಈ ತಿಳುವಳಿಕೆಯನ್ನು ಎಟುಕಿಸದಿದ್ದರೆ ಈ ಕ್ರಮಗಳಲ್ಲಿ ಅವರು ಹೇಗೆ ತಾನೇ ಪಾಲುಗೊಂಡಾರು ?

ನಾನು ಈ ಪ್ರಶ್ನೆಯನ್ನು ಭಾಷಾ ಮೋಹದಿಂದ ಎತ್ತಲಿಲ್ಲ. ತಾಂತ್ರಿಕಕ್ರಾಂತಿ ಮತ್ತು ಔದ್ಯಮಿಕ ಜನತಂತ್ರಗಳನ್ನೊಳಗೊಂಡ ಆಧುನೀಕರಣದ ಸಂಕೀರ್ಣ ಕ್ರಿಯೆಯಲ್ಲಿ ಒದಗುವ ಒಂದು ವಿಶಿಷ್ಟ ಭಾರತೀಯ ಸಮಸ್ಯೆಯ ಬಗ್ಗೆ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದೇನೆ.

ಇದೇ ಸಂದರ್ಭದಲ್ಲಿ ಈ ಸಮಸ್ಯೆಗೆ ನಿಕಟವಾಗಿ ಸಂಬಂಧಿಸಿದ ಮತ್ತೊಂದು ಸಂಗತಿಯನ್ನು ಗಮನಿಸಬಹುದು. ಭಾಷೆ ಸ್ಥಾವರವಾದ್ದಲ್ಲ. ವಿಕಾಸದ ಫಲ ಅದು. ಸಮಾಜ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತಂತ್ರಜ್ಞಾನ ಮುಂತಾದುವುಗಳಲ್ಲಿ ನಡೆದ ವೇಗ ಪರಿವರ್ತನೆಗಳ ಅವಧಿಯು ಭಾಷೆಯಲ್ಲೂ ಸಹ ವೇಗವಾಗಿ ಬದಲಾವಣೆಯಾದದ್ದನ್ನು ಕಾಣುತ್ತದೆ. ಈ ಹೊತ್ತು ಔದ್ಯಮಿಕ ಕ್ಷೇತ್ರದಲ್ಲಿ ಬಲು ಕ್ಷಿಪ್ರವಾದ ಬದಲಾವಣೆಗಳಾಗುತ್ತಿವೆ. ಬೇರೆ ಬೇರೆ ಭಾಷಾ ಸಮೂಹಗಳ ಅನಕ್ಷರಸ್ಥ, ಅರೆ ಅಕ್ಷರಸ್ಥ ಮತ್ತು ಅಕ್ಷರಸ್ಥ ಕೆಲಸಗಾರರು ಹಾಗೂ ಇಂಗ್ಲಿಷ್ ವಿದ್ಯಾಭ್ಯಾಸ ಹೊಂದಿರುವ ಉಸ್ತುವಾರಿಕಾರರು ಮತ್ತಿತರ ಸಿಬ್ಬಂದಿಗಳೊಡನೆ ಕೆಲಸದ ಸ್ಥಳದಲ್ಲಿ ಮತ್ತು ಸಮಾಲೋಚನೆಯ ಮೇಜಿನಲ್ಲಿ ಪರಸ್ಪರ ಅಂತರ್‌ವರ್ತನೆ ನಡೆಸುತ್ತಿದ್ದಾರೆ. ಅವರು ತಮ್ಮೊಳಗೇ, ದಿನದಿನವೂ ಆಧುನಿಕ ಯಂತ್ರ ಸ್ಥಾವರಗಳ ಬಗ್ಗೆ, ಉತ್ಪನ್ನಗಳ ಬಗ್ಗೆ, ಬಿಡಿಭಾಗಗಳ ಬಗ್ಗೆ ಮತ್ತು ಇಂತಹ ಅನೇಕ ಸಂಗತಿಗಳ ಬಗ್ಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಅವರು ಬಳಸುವ ಭಾಷೆ ಸಹ ಕುತೂಹಲಕರವಾಗಿ ಅನೇಕ ವಿಧಗಳಲ್ಲಿ ಬದಲಾಗುತ್ತಿದೆ. ಇದು ಔದ್ಯಮಿಕ ಜಗತ್ತಿನಲ್ಲಿ ಪರಸ್ಪರ ಸಂವಹನದ ಇನ್ನೊಂದು ಅಂಶ.

ಈ ಎಲ್ಲ ಅಂಶಗಳನ್ನೂ ಅಧ್ಯಯನ ಮಾಡುವುದು ರೋಮಾಂಚಕ ಮತ್ತು ಶೈಕ್ಷಣಿಕವಾದ ಅನುಭವವಿದ್ದೀತು. ಯಾವುದಾದರೂ ವಿಶ್ವವಿದ್ಯಾಲಯದ ಕೆಲವು ಯುವ ವಿದ್ವಾಂಸರು ಈ ಅಧ್ಯಯನ ನಡೆಸುವರೆಂದು ನಾವು ತಕ್ಕಮಟ್ಟಿಗೆ ವಿಶ್ವಾಸದಿಂದ ಆಶಿಸಬಹುದು. ಕೆಲವು ಕಾರ್ಮಿಕ ಸಂಘಟಕರಾದರೂ ಇಂಥ ಸಮಸ್ಯೆಗಳನ್ನು ನೇರವಾಗಿ ಎದುರಿಸಿ ಪರಿಹಾರದ ಮಾರ್ಗೋಪಾಯಗಳನ್ನು ರೂಪಿಸಬಲ್ಲರೆಂದು ಸಹ ನಾನು ಆಶಿಸುತ್ತೇನೆ.